ಇದರಿಂದ ಬಡವರಿಗೆ ಸ್ವಲ್ಪ ಭಾಗ ಮೀಸಲು ಇಡಬೇಕು, ಆದ್ದರಿಂದ ನಿಮ್ಮ ರಿಸೋರ್ಸಸ್ ನೋಡಿಕೊಂಡು ಬಡವರಿಗಾಗಿ ಇಂತಹ ನೀತಿ ಇದೆ ಎಂದು ಪ್ರಕಟಿಸಿ ಅದನ್ನು ಜಾರಿಗೆ ಕೊಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಈ ಯೋಜನೆ ಇರುವುದೇ ಬಡವರಿಗಾಗಿ, ಬಡವರಿಗೆ ಬೇರಾವ ಯೋಜನೆಯೂ ಇಲ್ಲ.

SRI M. H. JAYAPRAKASH NARAYAN :—Can the Government make it apoint to reserve certain percentage of amount for the weaker sections of society. *viz.*, the Schedule Castes, the Schedule Tribes and the Backward classes ?

ಶ್ರೀ ಕೆ. ಹೆಚ್. ಪಾಟೀಲ್ :—ಈ ಯೋಜನೆಗಳನ್ನು ಬಡವರಿಗಾಗಿಯೇ ಮಾಡುವುದು ಅದಲ್ಲದೆ ಬೇರೆ ಯಾವ ಗುರಿಯೂ ಇಲ್ಲ. ಮಾನ್ಯ ಸದಸ್ಯರಿಗೆ ಇದು ಚೆನ್ನಾಗಿ ಗೊತ್ತಿದ್ದರೆ, ಮತ್ತೆ ಇಲ್ಲಿ ಪ್ರಶ್ನೆ ಹಾಕಿ ಉತ್ತರ ಕೇಳುವ ಅವಶ್ಯಕತೆಯೇ ಇರಲಿಲ್ಲ.

IRREGULAR RUNNING OF BUSES BETWEEN BANGALORE AND KANAKAPURA

469. SRI S. KARIAPPA (Kanakapura).—

Will the Minister for Labour be pleased to state :—

(*a*) whether Government has received complaints regarding irregular running of M S.R.T.C. Buses between Bangalore and Kanakapura ;

(*b*) if so, the action taken in the matter ;

(*c*) if not, the reason for the same ?

SRI AZEEZ SAIT (Minister for Labour).—

(*a*) Yes.

(*b*) Strict instructions have been issued to the concerned to ensure regular operation of services and also M.S.R.T.C. has increased the services.

(*c*) Does not arise in view of the reply to clause (*b*) above.

ಶ್ರೀ ಎಸ್. ಕರಿಯಪ್ಪ :—ಇಲ್ಲಿನ ಬಸ್ಸುಗಳು ಸರಿಯಾಗಿ ಸಮಯಕ್ಕೆ ಹೊರಟು ಸೇರುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಅಜೀಜ್ ಸೇಟ್ :—ಕನಕಪುರದ ಕಡೆ ಹೋಗುವ ಬಸ್ಸುಗಳ ಬಗ್ಗೆ ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡಲಾಗಿದೆ. ಇಂತಹ ತಪ್ಪುಗಳು ಆಗಬಾರದು ಎಂದು ಸರಕಾರ ಇದನ್ನು ಗಮನದಲ್ಲಿಟ್ಟು ಕೊಂಡು ಸೂಕ್ತ ಎಚ್ಚರಿಕೆಗಳನ್ನು ಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪ :—ರಾಷ್ಟ್ರೀಕರಣವಾಗುವುದಕ್ಕೆ ಮೊದಲು ಇಲ್ಲಿ ಓಡಾಡುತಿದ್ದ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ? ಮತ್ತು ಈಗ ಸರಕಾರ ಹಾಕಿರುವ ಬಸ್ಸುಗಳು ಎಷ್ಟು ಮತ್ತು ಹೆಚ್ಚಿಗೆ ಹಾಕಿರುವ ಬಸ್ಸುಗಳು ಎಷ್ಟು ? ರಾಷ್ಟ್ರೀಕರಣವಾದ ನಂತರ ಎಷ್ಟು ಬಸ್ಸುಗಳ ಸಂಖ್ಯೆಯನ್ನು ಹೆಚ್ಚು ಮಾಡಲಾಗಿದೆಯೇ ?

SRI AZEEZ SAIT :—Four Non-Stop trips between Bangalore and Kanakapura and one Non-stop Trip from Bangalore to Malavalli.

ಶ್ರೀ ಟಿ. ಎಂ. ಮಂಜುನಾಥ್ :—ಬಸ್ಸುಗಳು ತಡವಾಗಿಯೇ ಹೊರಡುತ್ತಿರುವುದರಿಂದ ಇದನ್ನು ತ್ವರಿತವಾಗಿ ಸುಧಾರಿಸಲು ಸರಕಾರ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಅಜೀಜ್ ಸೇಟ್ :—ಸಾಕಷ್ಟು ಎಚ್ಚರಿಕೆ ಕೊಡಲಾಗಿದೆ. ಇನ್ನು ಮುಂದೆ ಆಗುವುದಿಲ್ಲ ಎಂದು ಇದೆ.

ಶ್ರೀ ಕೆ ಎನ್. ವೀರಪ್ಪಗೌಡ :—ಬಸ್ಸುಗಳು ಟೈಂಗೆ ಸರಿಯಾಗಿ ಓಡುವುದೇ ಇಲ್ಲ. ಬಸ್ ಸ್ಟ್ಯಾಂಡಿಗೆ ಹೋದರೆ ಬಸ್ಸು ಎಂಟು ಗಂಟೆಗೆ ಹೊರಡುವುದಾಗಿದ್ದರೆ ಆ ಬಸ್ಸು ಸ್ಟ್ಯಾಂಡಿಗೆ ಎಂಟೂವರೆ ಗಂಟೆಗೆ ಬರುತ್ತದೆ ಮತ್ತು ಬಸ್ಸುಗಳಿಗೆ ಅರ್ಧಗಂಟೆ ಮುಂಚೆ ಟಿಕೆಟ್ಟು ಬೇಕೆಂದು ಕೇಳಿದರೂ ಕೊಡುವುದಿಲ್ಲ ಬಸ್ಸುಗಳು ಬರಲಿ ಬಂದ ಮೇಲೆ ಕೊಡುತ್ತೇವೆ ಎಂದು ಹೇಳುತ್ತಾರೆ. ೮ ಗಂಟೆ ಬಸ್ಸು ಎಂಟೂವರೆಗೆ ಬಂದರೆ ಆ ನಂತರ ಟಿಕೆಟ್ಟು ಕೊಟ್ಟು ಹೊರಡಬೇಕಾದರೆ ಒಂದು ಗಂಟೆ ಕಾಲ ತಡವಾಗುತ್ತದೆ. ಇವೆಲ್ಲಾ ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ :—ಇದು ಆಗದ ಹಾಗೆ ಈಗ ಸಾಕಷ್ಟು ಎಚ್ಚರಿಕೆ ಸೂಚನೆಗಳನ್ನು ಕೊಡ ಲಾಗಿದೆ ಮತ್ತು ಹಿಂದೆ ಆಗುತ್ತಿದ್ದ ಹಾಗೆ ತಡವಾಗುತ್ತಿಲ್ಲ. ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಹಚ್. ಪುಟ್ಟರಂಗನಾಥ್ :—ಬಸ್ಸುಗಳು ಡಿಪೋ ಬಿಡುವ ಮುನ್ನ ಇಲ್ಲಿರುವ ಕಂಟ್ರೋ ಲಿಂಗ್ ಆಫೀಸರುಗಳು ಎಂದರೆ ಇಂಜನೀಯರು ಇತ್ಯಾದಿ ಅಧಿಕಾರಗಳಿಗೆ ಇಂತಿಷ್ಟೇ ಕಾಲದಲ್ಲಿ ಬಸ್ಸುಗಳನ್ನು ಸ್ಟ್ಯಾಂಡಿಗೆ ಹೊರಡಿಸಬೇಕು ಎಂದು ಸರಿಯಾಗಿ ಸೂಚನೆಗಳನ್ನು ಕೊಡುತ್ತಿಲ್ಲ. ಇದರಿಂದ ಬಹಳ ಜನಕ್ಕೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿಯೇ ?

SRI AZEEZ SAIT.—All that the member has been saying has come to my notice. I have instructed that the Divisional Controller should invite all the M.L.As. to the respective Depots immediately after the Assembly Session is over and hold discussions with them. Such discussions are to be held once in three months. We have also decided to fix the responsibility on the Head of the Division for the irregularities, if any, in the timings. Now, to a certain extent, there is improvement, though I do not claim that it has improved cent per cent. I admit it requires further improvement. Necessary steps will be taken.

9.30 P.M.

ಶ್ರೀ ಎಚ್. ಪುಟ್ಟದಾಸ.—ಈ ಮಾರ್ಗ ರಾಷ್ಟ್ರೀಕರಣವಾದಮೇಲೆ ೫೦ ಪಾಳಿಗಿ ಕಾರುಗಳು ಓಡಾಡುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಈ ಮಾರ್ಗದಲ್ಲಿ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸು ವುದಕ್ಕಾಗುವುದಿಲ್ಲವೇ?

SRI AZEEZ SAIT.—One or two more buses require to be put on that line. Immediately we get the chassis we have already ordered, certainly we will put it.

DEVELOPMENT OF KODACHADRI, ETC., AS TOURIST CENTRES IN THIRTHAHALLI CONSTITUENCY

546. SRI KONANDUR LINGAPPA (Thirthahally).—Will the Minister for Labour be pleased to state.—